ದಂಪತಿ ಸ್ವರ್ಗದಿಂದ ಇಳಿದ ಫರಿಶ್ತಗಳಂತೆ ಕಂಡು ಬಂದರು. ರೆಹಮತ್ ಅತಿಥಿ ಸತ್ಕಾರದಲ್ಲಿ ಯಾವ ಕೊರತೆಯನ್ನೂ ಮಾಡಲಿಲ್ಲ. ಅಡುಗೆಯಂತೂ ಅತ್ಯಂತ ರುಚಿಕರವಾಗಿತ್ತು ರೆಹಮತ್‌ಳ ಗಂಡ ಶರೀಫ್ ಅತಿಥಿಗಳೊಡನೆ ಅತ್ಯಂತ ಸಭ್ಯವಾಗಿ ವರ್ತಿಸಿದ. ನಯಾಜ್ ಸ್ವಲ್ಪ ರಿಜರ್ವ್ ಆಗಿದ್ದಾನೆ ಎಂದು ಅವಳಿಗೆ ಅನಿಸಿತು. ಹೀಗಾಗಿ ಅವನಿಗೆ ಕಣ್ಣಿನಲ್ಲಿಯೇ ಸನ್ನೆ ಮಾಡಬಹುದೇನೋ ಎಂದು ಅವನನ್ನು ಒಂದೆರಡು ಬಾರಿ ದುರುಗುಟ್ಟಿ ನೋಡಿದಳು. ಆದರೆ, ಅವನು ತಾಯಿಯತ್ತ ತಿರುಗಿ ನೋಡಲೇ ಇಲ್ಲ. ಬದಲಿಗೆ ಅವಳು ಬಾರಿ ಬಾರಿಗೆ, 'ನಿಮ್ಮಷ್ಟು ದಿವ್ಯವಾದ ಮನೆಯಲ್ಲ ನಮ್ಮದು; ಗರೀಬ್‌ಖಾನಾ... ಇಲ್ಲಿಯವರೆಗೂ ಬಂದಿರಲ್ಲಾ' ಎಂದು ವಿನೀತಳಾಗಿ ಮುಜುರೆ ಒಪ್ಪಿಸುತ್ತಿದ್ದುದನ್ನು ಕಂಡು ಚಚ್ಚಿ ಹಾಕುವಷ್ಟು ಕೋಪ ಬಂದಿತ್ತು. ಅಷ್ಟೇ ಅಲ್ಲದೆ, ತಾನು ಆದಷ್ಟು ಬೇಗ ಅಜ್ರಾಳಿಗೊಂದು ಗಂಡು ಹುಡುಕದಿದ್ದಲ್ಲಿ ಅವಳಿಗೆ ಹುಚ್ಚು ಹಿಡಿಯಬಹುದೇನೋ ಎಂಬ ಆತಂಕವೂ ಆರಂಭವಾಯಿತು. ಈ ಪ್ರಹಸನವು ಒಂದು ಸಾರಿ ಮುಗಿದರೆ ಸಾಕೆಂದು ಅವನು ಚಡಪಡಿಸತೊಡಗಿದ. ಯಾರೊಬ್ಬರೂ ವ್ಯಕ್ತ ಪಡಿಸದಿದ್ದರೂ ಇದು ಹೆಣ್ಣು ನೋಡುವ ಶಾಸ್ತ್ರವೇ ಎಂದು ಅಲ್ಲಿದ್ದ ಪ್ರತಿಯೊಬ್ಬರಿಗೂ ಅರ್ಥವಾಗಿದ್ದು, ಅಜ್ರಾ ವಿನಾ ಕಾರಣ ತಲೆಯ ಮೇಲೆ ಸೆರಗನ್ನು ಹೊದ್ದು ರೂಮಿನೊಳಗೆ ಸೇರಿ ಬಿಟ್ಟಿದ್ದು... ಅನಗತ್ಯವಾಗಿ ಆಭರಣಗಳನ್ನು ಹೇರಿಕೊಂಡು ರೇಷ್ಮೆ ಸೀರೆಯನ್ನುಟ್ಟಿದ್ದು... ಓ ಮೈಗಾಡ್... ಅವನು ಊಟವನ್ನೂ ಮಾಡದೆ ಹೊರಬಂದ.

ಮತ್ತೆ ಅವನು ಮನೆಗೆ ಮರಳಿದಾಗ, ಸಂಜೆಗತ್ತಲಾಗಿತ್ತು. ಶರೀಫ್ ಅವನಿಗೆ ಮಾಡಿದ್ದ ಹಲವಾರು ಕರೆಗಳನ್ನು ಅವನು ಸ್ವೀಕರಿಸಲೇ ಇಲ್ಲ. ಬಂದು ಸೀದಾ ತನ್ನ ಕೋಣೆಗೆ ಹೋಗಿ ಬಾಗಿಲು ಬಡಿದುಕೊಂಡ. ತನ್ನ ತಂದೆಯ ಕರೆಗಾಗಲೀ ತಾಯಿಯ ಕಣ್ಣೀರಿಗಾಗಲೀ ಅವನು ಕರಗಲಿಲ್ಲ. ತನ್ನ ತಾಯಿಗೆ ತನ್ನ ಮೇಲೆ ಯಾಕೆ ನಂಬಿಕೆ ಬರುತ್ತಿಲ್ಲಾ. ತನ್ನ ಸಾಮರ್ಥ್ಯವನ್ನು ಮತ್ತು ತನ್ನನ್ನು ಆಕೆ ಯಾಕೆ ಕಡೆಗಣಿಸುತ್ತಿದ್ದಾಳೆ... ಆ ಮೂಲಕ ಆಕೆ ತನ್ನನ್ನು ತಾನೇ ಯಾಕೆ ಅವಮಾನದಂಚಿಗೆ ತಂದು ನಿಲ್ಲಿಸಿಕೊಂಡಿದ್ದಾಳೆ. ಅಜ್ರಾಳ ಮದುವೆಗಾಗಿ ಆಕೆ ಪಡುತ್ತಿರುವ ಪಾಡು ಮತ್ತು ಅವಳ ಅಸಹಾಯಕತೆ, ಗೋಗರೆಯುವಿಕೆ, ದೈನ್ಯತೆ ಅವನ ಅಸಹನೆಯನ್ನು ಹೆಚ್ಚಿಸುತ್ತಿತ್ತು. ಅಜ್ರಾಗೆ ಗಂಡು ಹುಡುಕುವುದರಲ್ಲಿ ತಾನು ಎಲ್ಲಿ ಎಡವಿದೆ... ಅವನ ಅಂತರಂಗದ ಗೊಂದಲಗಳಲ್ಲಿ ಅವನು ಬಂದಿಯಾಗಿ ಕಣ್ಣು ಮುಚ್ಚಿದರೂ ಅವನ ತಾಯಿಯ ದೈನ್ಯತೆ, ಅಸಹಾಯಕತೆ, ಹಲಬುವಿಕೆ ಅವನ ರೆಪ್ಪೆಯಾಚೆಗೂ ಪಸರಿಸಿ ಅವನ ನಿದ್ರೆಯನ್ನು ಕಸಿಯಿತು.

ಥತ್... ಎಂದು ಎದ್ದು ಕುಳಿತವನೇ ಕಂಪ್ಯೂಟರನ್ನು ಆನ್ ಮಾಡಿದ. ಮುಳುಗುವವನು ಉಸಿರಾಟಕ್ಕಾಗಿ ಹೋರಾಡುವಷ್ಟು ತೀವ್ರತೆಯಿಂದ ವರಾನ್ವೇಷಣೆಗೆ ತೊಡಗಿದ. ಮತ್ತು ನನ್ನ ತಂಗಿಗೊಂದು ಗಂಡು ಕೊಡಿ ಎಂತಲೇ ಅವನು ಕೂಡಾ ಕೋರುತ್ತಿದ್ದ; ಆದರೆ, ಅವನ ಕ್ರಮ ಭಿನ್ನವಾಗಿತ್ತು ಅಭಿಮಾನಪೂರ್ವಕವಾಗಿತ್ತು ಮತ್ತು ತಾನು ಹುಡುಕಿಯೇ ತೀರುವೆನು ಎಂಬ ಛಲದಿಂದ ಕೂಡಿತ್ತು.

ಒಂದು ವಾರ ಕಳೆದರೂ ಮೈಸೂರಿನ ನೆಂಟರಿಂದ ಯಾವುದೇ ಉತ್ತರ ಬರಲಿಲ್ಲ. ಫೋನ್ ರಿಂಗಾದರೆ ಸಾಕು ರೆಹಮತ್‌ಳ ನಿರೀಕ್ಷೆಯ ನೋಟ ಚುರುಕಾಗುತ್ತಿತ್ತು. ತನ್ನ ನಿರೀಕ್ಷಿತ ಕರೆಯಲ್ಲವೆಂದು ಅರಿವಾದಾಗ ಆಕೆಯು ನಿರಾಶೆಯ ಮಡುವಿನಲ್ಲಿ ಮುಳುಗುತ್ತಿದ್ದಳು. ಅನುಗುಣವಾಗಿ ಹೃದಯದಾಳದ ಬೇಗುದಿಗೆ ಆರ್ದ್ರವಾಗಿ ರಫಿ ದನಿಯಾಗಿದ್ದ